
ತಪ್ಪಿಸಿಕೊಳ್ಳುವುದು ಇನ್ನೂ ಆಗಿಲ್ಲ. ನಾನು ನನ್ನ ಹಿರಿಯಣ್ಣನ ಹೋಟೆಲಿನಲ್ಲಿ ಚಹಾ, ಕಾಫಿ, ತಿಂಡಿಗಳನ್ನು ಮಾಡುತ್ತಿದ್ದುದ್ದಲ್ಲದೆ, ಸಪ್ಲಾಯರ್, ಕ್ಯಾಶಿಯರ್, ಕ್ಲೀನರ್ – ಹೀಗೆ ಸಕಲ ಕಲಾವಲ್ಲಭನಾಗಿ, ಶಾಲೆಯ ನಂತರದ ಸಮಯದಲ್ಲಿ ದುಡಿಯುತ್ತಿದ್ದೆ. ಆಗ ನಮ್ಮ ಹೋಟೆಲಿಗೆ ಬರುತ್ತಿದ್ದ ಗಿರಾಕಿಗಳು ವಿವಿಧ ಛಾಯೆಗಳ ವಿಭಿನ್ನ ವ್ಯಕ್ತಿತ್ವ ಹೊಂದಿದ ಜನರಾಗಿದ್ದರು. ನನ್ನ ಸಂಪರ್ಕಕ್ಕೆ ಬಂದ ವ್ಯಕ್ತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅವರ ನಡೆ ನುಡಿಗಳನ್ನು ನನ್ನ ಮನಸ್ಸಿನಲ್ಲಿ ದಾಖಲು ಮಾಡಿಕೊಳ್ಳುವುದು ನನ್ನ ಹವ್ಯಾಸ. ಹೀಗಾಗಿ ನನ್ನ ಕಾದಂಬರಿಯಲ್ಲಿ 'ಫಕೀರನಿಗೆ ಫಿಕೀರಿಲ್ಲದಂತೆ' ಪಾತ್ರಗಳು ಜೀವಂತಿಕೆ ಪಡೆಯುತ್ತವೆ ಎನ್ನುವುದು ನನ್ನ ಅನಿಸಿಕೆ.

◆ **ಸೂಕ್ಷ್ಮ ಅವಲೋಕನ, ಹೌದು. ಇದು ನಿಮ್ಮ ಅಪ್ಪಟ ವೈಜ್ಞಾನಿಕ ಹಿನ್ನೆಲೆಯನ್ನು ನೆನಪಿಸುತ್ತದೆ. ನೀವು ಜೀವರಸಾಯನ ಶಾಸ್ತ್ರ ಮತ್ತು ಆಹಾರ ವಿಜ್ಞಾನ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಿದ್ದೀರಿ. ಅದರ ಕಿರು ಪರಿಚಯ ಮಾಡಿಕೊಡುವಿರಾ? ಹಾಗೆಯೇ ವಿಜ್ಞಾನ ಕ್ಷೇತ್ರಕ್ಕೆ ಒಂದು ಕಿಣ್ವವನ್ನು (enzyme) ನೀವು ಪರಿಚಯಿಸಿದ ವಿಷಯದ ಕುರಿತು ಒಂದಿಷ್ಟು ತಿಳಿಸುವಿರಾ?**

ನಾನು ಸಂಶೋಧನೆ ಶುರು ಮಾಡಿದ್ದು ಜೀವಕೋಶಾಂತರ್ಗತವಾಗುಳ್ಳ (**intracellular**), ಸ್ವಂತ ಪೊರೆ ಹೊಂದಿದ ಲೈಸೋಸೋಮ್‌ಗಳೆಂಬ ಉಪಘಟಕಗಳ (**organelles**) ಮೇಲೆ. ಭಾರತದ ಭಾಭಾ ಪರಮಾಣು ಶಕ್ತಿ ಸಂಶೋಧನಾ ಕೇಂದ್ರದ (**BARC**) ಬಯೋಕೆಮಿಸ್ಟ್ರಿ ಮತ್ತು ಫುಡ್ ಟೆಕ್ನಾಲಜಿ ವಿಭಾಗದ ಫುಡ್ ಸಯನ್ಸ್ ಕಕ್ಷೆಯ ಮುಖ್ಯಸ್ಥರಾದ, ಕನ್ನಡಿಗ ಡಾ. ಉಮೇಶ್



**ಅಹಲ್ಯಾ ಬಲ್ಲಾಳ್**

ಮೂಲ ಉಡುಪಿ, ವಾಸ ಮುಂಬಯಿ. ವಿಜ್ಞಾನದಲ್ಲಿ ಪದವಿ, ಭರತನಾಟ್ಯ ವಿದ್ವತ್ ಪದವಿ, ಕನ್ನಡದಲ್ಲಿ ಸ್ನಾತಕೋತ್ತರ ಪದವಿ. ಜಾಹೀರಾತು ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಲೇಖನಗಳು ಪತ್ರಿಕೆ ಹಾಗೂ ಪೋರ್ಟಲ್‌ಗಳಲ್ಲಿ ಪ್ರಕಟಗೊಂಡಿವೆ. ಅಭಿನಯ, ರಂಗಭೂಮಿ, ನೃತ್ಯ, ಸಾಹಿತ್ಯ, ಅನುವಾದ, ಕಲಾ ಆಸ್ವಾದನೆ ಆಸಕ್ತಿಯ ಕ್ಷೇತ್ರಗಳು.

ಚಿತ್ರ: ಸಹ್ಯಾದ್ರಿ ನಾಗರಾಜ್